**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ.460/2019

ಸಿ.ಡಬ್ಲೂಃ 4 ಪಿ.ಡಬ್ಲೂಃ 6

ಹೆಸರುಃ ವೀರಪ್ಪ
ತಂದೆಯ ಹೆಸರುಃ ಮಲ್ಲಪ್ಪ ಬನ್ನಿಗೋಳ
ವಯಸ್ಸುಃ 60 ವರ್ಷ
ಉದ್ಯೋಗಃ ವ್ಯವಸಾಯ
ವಿಳಾಸಃ ಕುರಡಗಿ , ತಾಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 13/03/2023 ರಂದು ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಆರೋಪಿತರ ಪರ ಶ್ರೀ. ಪಿ ಕೆ ಯು ವಕೀಲರಿಂದಃ**

1. ನನ್ನ ತಾಯಿಯ ಹೆಸರಿನಲ್ಲಿ ಇದ್ದ ಜಮೀನುಗಳ ಉತಾರಗಳನ್ನು ನಾನು ಪ್ರತಿವರ್ಷ ತೆಗೆಯಿಸಿ ನೋಡುತ್ತಿದ್ದೆ ಎಂದರೆ ಸಾಕ್ಷಿ ನನ್ನ ತಾಯಿ ನೋಡುತ್ತಿದ್ದರು ಎಂದು ಹೇಳುತ್ತಾರೆ. 2015-16 ನೇ ಸಾಲಿನಲ್ಲಿ ನನ್ನ ತಾಯಿ ಉತಾರವನ್ನು ತೆಗೆಸಿ ನೋಡಿದ್ದಾರೆ ಎಂದರೆ ನಿಜ. ನನ್ನ ತಾಯಿ ರೋಣದ ಸಿನಿಯರ್ ಸಿವಿಲ್ ಜಡ್ಜ ನ್ಯಾಯಾಲಯದಲ್ಲಿ ಅಸಲು ದಾವೆ ನಂ. 14/2016 ರಂತೆ ಇದೇ ಜಮೀನುಗಳ ಮೇಲೆ ದಾವೆ ಮಾಡಿದ್ದರು ಎಂದರೆ ನಿಜ. ಆ ದಾವೆಯಲ್ಲಿ ಗಂಗಾಧರ ಅಂಗಡಿ ಪ್ರತಿವಾದಿ ಆಗಿದ್ದರು ಎಂದರೆ ನಿಜ. ಆ ದಾವೆಯಲ್ಲಿ ಗಂಗಾಧರ ಅಂಗಡಿ ಇವರು ತಮ್ಮ ಕೈಪಿಯತ್ತನಲ್ಲಿ ನನ್ನ ತಾಯಿಯೂ ಸಹ ಆ ಜಮೀನಿನ ಮೇಲಿನ ಹಕ್ಕನ್ನು

ಬಿಟ್ಟುಕೊಟ್ಟಿದ್ದರು ಎಂದು ಕೈಪಿಯತ್ತು ಸಲ್ಲಿಸಿದ್ದರು ಎಂದರೆ ಸಾಕ್ಷಿ ನನ್ನ ತಾಯಿ ಹೊರತು ಪಡಿಸಿ, ಉಳಿದವರು ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿದ್ದರು ಎಂದು ಹೇಳುತ್ತಾರೆ. ಆ ಸಮಯದಲ್ಲಿ ನನ್ನ ತಾಯಿಯನ್ನು ಕರೆದುಕೊಂಡು ಹೋಗಿ ನಾನು ಸಿವಿಲ್ ದಾವೆ ಮಾಡಿಸಿದ್ದೆ ಎಂದರೆ ನಿಜ. ಆ ಸಮಯದಲ್ಲಿ ನಾನು ವಕೀಲರಿಗೆ ಎಲ್ಲಾ ಜಮೀನುಗಳ ಉತಾರ ತೆಗೆಸಿ ಕೊಟ್ಟಿದ್ದೆ ಎಂದರೆ ಸಾಕ್ಷಿ ನನ್ನ ತಾಯಿಯೇ ತೆಗೆಸಿಕೊಟ್ಟಿದ್ದರು ಎಂದು ಹೇಳುತ್ತಾರೆ. ನನ್ನ ತಾಯಿ ಆ ದಾವೆಯಲ್ಲಿ ಒಂದು ಮೆಮೊ ಹಾಕಿ, not press (ವಜಾ) ಮಾಡಿಸಿಕೊಂಡಿದ್ದರು ಎಂದರೆ ನಿಜ. ನನ್ನ ತಾಯಿಯೇ ಆ ರೀತಿ ಹಕ್ಕು ಬಿಟ್ಟು ಕೊಟ್ಟಿದ್ದರಿಂದ ವಜಾ ಮಾಡಿಸಿಕೊಂಡಿದ್ದರು ಎಂದರೆ ಸರಿ ಅಲ್ಲ. ನನಗೆ ಜಯಶ್ರಿ ಎಂಬ ತಂಗಿ ಇದ್ದಾಳೆ ಎಂದರೆ ನಿಜ. ನನ್ನ ತಾಯಿ ಗಂಗಾಧರ ಇವರನ್ನು ಜಯಶ್ರಿಯನ್ನು ಮದುವೆ ಆಗು ಎಂದು ಕೇಳಿದ್ದರು ಎಂದರೆ ಸರಿ ಅಲ್ಲ . ಆಗ ಗಂಗಾಧರ ನನಗೆ ಮದುವೆ ಆಗಲು ಇಷ್ಟ ಇಲ್ಲ ಎಂದು ನಿರಾಕರಿಸಿದ್ದರು ಎಂದರೆ ಸರಿ ಅಲ್ಲ. ಆ ಕಾರಣದಿಂದ ನನಗೆ ಮತ್ತು ನನ್ನ ತಾಯಿಗೆ ಗಂಗಾಧರ ಇವರ ಮೇಲೆ ಸಿಟ್ಟು, ದ್ವೇಷ ಇತ್ತು ಎಂದರೆ ಸರಿ ಅಲ್ಲ.

**ಮುಂದುವರೆದ ಪಾಟೀ ಸವಾಲುಃ- ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**( ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**